# ಆಹಾ ಸುದ್ದಿ!

★ ಸಸಿತೋಟ



ಥಾಯ್ಲಂಡ್‌ನಲ್ಲಿ 'ವಧುಗಳ ಓಟ'ದ ಸ್ಪರ್ಧೆಯನ್ನು ವಿವಿಧ ಕಂಪೆನಿಗಳು ಪ್ರಾಯೋಜಿಸುತ್ತವಂತೆ. ಭರ್ಜರಿ ನಗದು ಹಾಗೂ ಚಿನ್ನದ ಒಡವೆಗಳ ಬಹುಮಾನಗಳಂತೆ. ವಧುವಿಗೆ ನೆರವು ನೀಡುವ ವರ ಆಕೆಯನ್ನು ಹೊತ್ತುಕೊಂಡು ಓಡುವುದೂ ಉಂಟಂತೆ. ವಧುಗಳಿಗಾಗಿ ಓಟದ ಸ್ಪರ್ಧೆಯನ್ನು ಇಟ್ಟರೆ... ಎಷ್ಟೆಲ್ಲ ಅಪಘಾತಗಳು ಸಂಭವಿಸುತ್ತವೋ!



ಚೀನಾದಲ್ಲಿ ಗಬ್ಬು ನಾರುತ್ತಿರುವ ಸಾರ್ವಜನಿಕ ಶೌಚಾಲಯಗಳು ಬಹು ಕುಖ್ಯಾತ. ಈಗ ಅಲ್ಲಿಯ ಅಧ್ಯಕ್ಷರು 'ಸ್ವಚ್ಛ ಭಾರತ್' ಅನುಸರಿಸಿ ಎಂದು ಆದೇಶ ನೀಡಿದ್ದಾರಂತೆ. ಪರಿಣಾಮ ಇಂತಹ ಪಾರದರ್ಶಕ ಶೌಚಾಲಯಗಳು. ಭಾರತವೂ ಇಂತಹ 'ಕ್ಲೀನ್ ಚೀನಾ' ಅನುಸರಿಸಲು ಹೋದರೆ.. ಶೌಚಾಲಯದ ಎದುರು ಖಾಕಿ ಪಡೆ ಕಾವಲು ಹಾಕಬೇಕಾಗಬಹುದು.

ಸಿನಿಮಾ, ಟಿವಿ ಶೋ, ಜಾಹೀರಾತು ಚಿತ್ರೀಕರಣ, ಯುನಿಸೆಫ್ ರಾಯಭಾರಿ, ಮುಂಬೈ– ಅಮೆರಿಕ ಮಧ್ಯೆ ಹಾರಾಟ, ಸಾಮಾಜಿಕ ಜಾಲತಾಣಗಳ ನಿರ್ವಹಣೆ.. ಇವುಗಳ ಮಧ್ಯೆ ನಟಿ ಪ್ರಿಯಾಂಕಾ ಚೋಪ್ರಾಗೆ ಬಿಡುವೇ ಇಲ್ಲ ಎಂಬುದಂತೂ ನಿಜ. ಆದರೆ ಎಲ್ಲವನ್ನೂ ನಿಭಾಯಿಸಲು ಹೋರಾಡುತ್ತಿರುವ ಆಕೆ ತನ್ನ ಇಮೇಲ್ ನಿರ್ವಹಣೆಯನ್ನು ಮರೆತೇ ಬಿಟ್ಟಿದ್ದಾಳಂತೆ. ಒಟ್ಟು ಎರಡೂವರೆ ಲಕ್ಷಕ್ಕಿಂತಲೂ ಅಧಿಕ ಅನ್‌ರೆಡ್ ಅಂದರೆ ತೆರೆಯದೇ ಇರುವ ಮೇಲ್‌ಗಳು ಬಿದ್ದಿವೆಯೆಂದು ಆಕೆಯ ಟಿವಿ ಶೋದ ಸಹನಟ ಟ್ವಿಟರ್‌ನಲ್ಲಿ ಹಾಕಿದ್ದಾನಂತೆ. ಅಭಿಮಾನಿಗಳು ನಿರಾಶರಾಗಬೇಕಿಲ್ಲ, ನೆಚ್ಚಿನ ನಟಿ ಇನ್ನೊಂದು ದಾಖಲೆ ಮಾಡಿದ್ದಾಳಷ್ಟೆ.

ಪೆಟ್ರೋಲಿಗೆ ಬದಲಿ ಉತ್ಪನ್ನವನ್ನು ಲಂಡನ್ನಿನ ವಿಜ್ಞಾನಿಗಳು ಕಂಡು ಹಿಡಿದಿದ್ದಾರಂತೆ. ವ್ಯಕ್ತಿಯ ಚಿಂತೆಯನ್ನು ತಾತ್ಕಾಲಿಕವಾಗಿ ಓಡಿಸುವ ಬಿಯರ್ ವಾಹನವನ್ನೂ ಓಡಿಸಲು ಸಾಧ್ಯ ಎಂಬುದು ಅವರ ಸಂಶೋಧನೆಯಿಂದ ತಿಳಿದು ಬಂದಿದೆಯಂತೆ. ಎರಡು ಕ್ಯಾನ್ ಬಿಯರ್ ತನ್ನ ಹೊಟ್ಟೆಗಾದರೆ, ಇನ್ನೆರಡು ಕ್ಯಾನ್ ವಾಹನದ ಹೊಟ್ಟೆಗೆ. ತನ್ನ ಹೊಟ್ಟೆಗೆ ಕಡಿಮೆ ಬಿದ್ದರೆ ತುರ್ತಿಗೆಂದು ವಾಹನದಿಂದಲೂ ಎಳೆಯಬಹುದು.



ಈತ ಫ್ರೆಂಚ್ ಪ್ರಜೆ ಅಲೆಕ್ಸಿಸ್. ಅಪರೂಪದ ಪ್ರಾಣಿಗಳನ್ನು ಸಾಕುವುದೆಂದರೆ ಬಲು ಪ್ರೀತಿ. ಅವುಗಳಲ್ಲಿ ಜಿರಲೆಯೂ ಸೇರಿದ್ದು, ಈಗಾಗಲೇ ಅವುಗಳ ಸಂಸಾರವನ್ನೇ ಸಾಕುತ್ತಿರುವವರು ಇದೇನು ಮಹಾ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಿರಬಹುದು.



ಚೀನಾದಲ್ಲಿ ರಸ್ತೆ, ಪಾರ್ಕ್‌ಗಳಲ್ಲೆಲ್ಲ ವ್ಯಾಯಾಮ ಮಾಡಲು ಈ ರೀತಿಯ ಸಾಧನಗಳನ್ನೂ ಅಳವಡಿಸಿದ್ದಾರಂತೆ. ಲೋಹದ ತಿರುಗುಣಿಗಳಿಗೆ ಬಾರು ಕೋಲಿನಿಂದ ಬಾರಿಸುವುದು. ಯೌವನದ ಸಿಟ್ಟನ್ನೆಲ್ಲ ವೃದ್ಧಾಪ್ಯದಲ್ಲಿ ತೀರಿಸಿಕೊಳ್ಳಬಹುದು ಎಂಬ ಜೋಕ್ ಅಲ್ಲಿ ಸೃಷ್ಟಿಯಾಗಿದೆಯಂತೆ.